

ರಾಷ್ಟ್ರಗಳಲ್ಲಿರುವ ಸಿರಿವಂತಿಕೆಯ ಮೆರುಗು ಅಲ್ಲಿ ಕಾಣಲಿಲ್ಲ.

ಚಿಕ್ಕ ಚಿಕ್ಕ ಅಂಗಡಿಗಳು, ತೆರೆದ ಮಾರುಕಟ್ಟೆಗಳು, ಇಕ್ಕಟ್ಟಾದ ಗಲ್ಲಿಗಳು ಇವೆಲ್ಲ ಯೂರೋಪ್‌ನ ಇನ್ನೊಂದು ಮುಖದ ಪರಿಚಯ ಮಾಡಿಕೊಟ್ಟವು. ಯಾವುದೋ ಸಂದಿಗೊಂದಿಯಲ್ಲಿ ನಡೆದು ಅಂತೂ ನಾವು ಕಾಯ್ದಿರಿಸಿದ್ದ ಹಾಸ್ಟೆಲ್ ತಲುಪಿಕೊಂಡಾಗ ಸೂರ್ಯ ಇನ್ನೇನು ಮುಳುಗುವ ಸನ್ನಾಹದಲ್ಲಿದ್ದ. ಅಂದು ಸಂಜೆ ನಮ್ಮ ಕೊಠಡಿಯ ಕಿಟಕಿ ತೆರೆದಾಗ, ಸಂಧ್ಯಾರಾಗದಲ್ಲಿ ಮಿಂದೆದ್ದ ಅಥೆನ್ಸ್‌ನ ಖ್ಯಾತ ಪ್ರೇಕ್ಷಣೀಯ ಸ್ಥಳವಾದ ಪಾರ್ಥೆನಾನ್ ದರ್ಶನವಿತ್ತಿತು. ಮರುದಿನ ಅಥೆನ್ಸ್ ನಗರಿಯಿಂದ 180 ಕಿ.ಮೀ ದೂರದಲ್ಲಿರುವ ಡೆಲ್ಫಿ ಎನ್ನುವ ಉತ್ಖನನ ಪ್ರದೇಶವನ್ನು ನೋಡಲು ಬೆಳ್ಳಂಬೆಳಗ್ಗೆಯೇ ಎದ್ದು ಬಸ್ ಹತ್ತಿದೆವು. ಪರ್ನಾಸ್ಸಸ್ ಬೆಟ್ಟವನ್ನು ಅಡಿಪಾಯವನ್ನಾಗಿಸಿಕೊಂಡು ಉದ್ದಕ್ಕೂ ಹರಡಿರುವ ಡೆಲ್ಫಿ ಸುಮಾರು ಕ್ರಿಸ್ತ ಪೂರ್ವ 8ನೇ ಶತಮಾನದ ಹೊತ್ತಿಗೆ ಧಾರ್ಮಿಕ ಸ್ಥಳವಾಗಿ ಪ್ರಾಮುಖ್ಯ ಪಡೆಯಿತು. ಆದರೆ ಅದಕ್ಕಿಂತ ಹಿಂದೆಯೇ ಇಲ್ಲಿ ಜನವಸತಿ ಇತ್ತೆಂಬುದಕ್ಕೆ ಪುರಾವೆಗಳಿವೆ. ಡೆಲ್ಫಿಯನ್ನು ಮೊದಲು ಪೈಥೋ ಎನ್ನುವ ಹೆಸರಿನಿಂದ ಕರೆಯಲಾಗುತ್ತಿತ್ತು.


ಹಿಂದೆ ಗ್ರೀಕರು ಇದನ್ನು ಜಗತ್ತಿನ



ಮ್ಯೂಸಿಯಂ ನಲ್ಲಿರುವ ಸಾರಥಿಯೊಬ್ಬನ ಪ್ರತಿಮೆ.

ಕೇಂದ್ರಸ್ಥಾನವೆಂದು ತಿಳಿದಿದ್ದರಂತೆ. ಅದಕ್ಕಾಗಿ ಓಂಫಲೋಸ್ ಎಂಬ ಕಲ್ಲಿನ ಸ್ಮಾರಕವನ್ನು ಸಹ ಕಟ್ಟಿ ನಿಲ್ಲಿಸಿದ್ದರು. ಓಂಫಲೋಸ್ ಎಂದರೆ ಪುರಾತನ ಗ್ರೀಕ್ ಭಾಷೆಯಲ್ಲಿ ನಾಭಿ ಎಂಬರ್ಥ. ಗುಡುಗು, ಮಿಂಚುಗಳ ದೇವತೆಯಾದ ಜೂಸ್ ಭೂಮಿಯ ಕೇಂದ್ರವೆಲ್ಲಿದೆ ಎಂದು ಹುಡುಕಲು ಜಗತ್ತಿನ ಎರಡು ತುದಿಗಳಿಂದ ಒಂದೊಂದು ಹದ್ದುಗಳನ್ನು ಹಾರಿಸಿಬಿಟ್ಟನಂತೆ. ಅವು ಹಾರಿ ಬಂದು ಭೇಟಿಯಾದದ್ದು ಡೆಲ್ಫಿಯಲ್ಲಿ ಎಂಬ ಸ್ವಾರಸ್ಯಕರವಾದ ಕಥೆ ಅವರ ಪುರಾಣದಲ್ಲಿದೆ. ಸುಮಾರು ಮೂರುವರೆ ಗಂಟೆಗಳ ಪ್ರಯಾಣದ ನಂತರ ಬಸ್ ಡೆಲ್ಫಿ ತಲುಪಿತು. ಸುತ್ತಲೂ ಹಸಿರುಬೆಟ್ಟಗಳ ಸಾಲು ಸಾಲು, ಕಣಿವೆಯಾಳದಲ್ಲೊಂದು ನೀಲಿ ಸರೋವರ, ಬೆನ್ನಿಗೇ ಕಾಣುವ ಪುರಾತನ ಅವಶೇಷಗಳು, ಆ ಅವಶೇಷಗಳ ಬದಿಯಲ್ಲೇ ಬೆಳೆದಿದ್ದ ಹೊಸ ಪಟ್ಟಣ ಇವಿಷ್ಟೂ ನಮ್ಮನ್ನು ಎದುರುಗೊಂಡವು. ಬಸ್ ನಿಲ್ದಾಣದಿಂದ ಕೆಲ ಹೆಜ್ಜೆಗಳಷ್ಟು ದೂರದಲ್ಲಿ ಉತ್ಖನನ ಪ್ರದೇಶದ ಪ್ರವೇಶ ದ್ವಾರವಿತ್ತು. ಸುಮಾರು 12 ಯುರೋಗಳಷ್ಟು ದುಡ್ಡು ತೆತ್ತು ಟಿಕೆಟ್ ಕೊಂಡುಕೊಂಡು ಒಳನಡೆದೆವು.

ಪ್ರವೇಶ ದ್ವಾರದಿಂದ ಕಲ್ಲುಹಾಸಿನ ದಾರಿಯಲ್ಲಿ ಮುಂದೆ ನಡೆದರೆ 'ಅಥೇನಿಯನ್ ಟ್ರೆಶರಿ' ಎಂದು ಕರೆಯಲಾಗುವ ಕಟ್ಟಡ ಎದುರಾಗುತ್ತದೆ. ಅದನ್ನು ಇತ್ತೀಚೆಗೆ ಮರು ನಿರ್ಮಾಣ ಮಾಡಲಾಗಿದ್ದರೂ ಕ್ರಿಸ್ತ ಪೂರ್ವ



ಆಂಫಿ ಥಿಯೇಟರ್